ಮೈಸೂರ ಗೆಜಿಟ್.

ನಂ. 49 ಸರ್ಕಾರದಿಂದ ಪಾಯಿಷ್ ಆದ್ದು. ಸನ್ 1887.

ಬೆಂಗಳೂರು, ಶನಿವಾರ, ಡಿಶಂಬರ್ ತಾ|| 10, ಸನ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜ್‌ಯವರು, ಸರ್ವೇ ವ ಇನಾಂ ಸೂಪರ್‌ಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜ್‌ರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೋಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟ್ ಆಫೀಸರ್‌ಗಳು, ಇವರುಗಳಿಂದ ಕೊಡೋಣಾಪ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಪಾಫೀಸ್ ನೋಟೀಸುಗಳು.

3ನೇ ಭಾಗ–ಶ್ರೀಮ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟಆಕ್ಟುಗಳು ವ ರೆಗ್ಯುಲೇಷ್ಸಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 25ನೇ ನವಂಬರ್ 1887.

ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡೀ ವ ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬ್ಹಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ವ ಕಾಯಂಗುತ್ತಾ ಗ್ರಾಮಗಳು ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳಗಳಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾಪ ಹರಾಜುಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳ್ಗೆ 11 ಘಂಟೆಗೆ ಹರಾಜು ಸುರುವಾಗಿ ಉಳಿಕೆ ಯಾವದೂ ಇಲ್ಲದೇ ಗ್ರಾಮಗಳು ಚಡ ದಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾ ಎಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಆವ್ವಲ್ ಕ್ರಯದಾರನ ಖರ್ಚಿನಲ್ಲಿ ಪ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜೂ ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೇಳ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುವ್ವುಕೂಫ್ ಮಾಡಲ್ಪಡತಕ್ಕದ್ದು. ಪರಂತು, ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೇ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ರುಜೂ ಮೊಹರ್ ಮಾಡೋಣಾದ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತಿಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀ ವಹಿಸಿದ ಕಾಯಂಗುತ್ತಾದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕಿಸ್ತಿ ಪೈಮೆಂಟ್.	ಯಾವ ಬಾಕೀಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
				ಎ. ಸೆಂ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕೋಲಾರ.	ನರಸಾಪುರ.	ಜೋಡೀ ಬಾಗೂರು ಸೊಂಣಹಳ್ಳಿ	ಪಿ. ವಾಸುದೇವಾಚಾರಿ ಮತ್ತು ಶಾಮಾಚಾರಿ.	151 48	80 0 0	65 10 8	684 13 4 ಮತ್ತು ಬಡ್ಡಿ.	ಸ್ ಸ್ 1888ನೇ ಇಸವಿ ಜನವರೀ ತಾರೀಖು 6ರಲ್ಲಿ ತಾಲ್ಲೂಕು ಕಛೇರಿಯಲ್ಲಿ ಅನುಭವದಾರರ ರೂಬರೂ.
ಕೋಲಾರ.	ನರಸಾಪುರ.	ಕಾಯಂಗುತ್ತಾ ಜೋಕ್ಕಹಳ್ಳಿ	ಚೆಂದ್ರಶೇಖರಪ್ಪ ವಗೈರೆ	ಖಂ. ಕೂ. ಪ. 25 15 8¼	139 5 6	99 8 5	411 14 3 ಮತ್ತು ಬಡ್ಡಿ	

ತಾರೀಖು 25ನೇ ನವಂಬರ್ 1887.

1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ನಿಯಮಗಳನುಸರಿಸಿ ಇದರಿಂದ ಪ್ರಕಟಪಡಿಸುವದೇನಂದರೆ, ಇದರಡೀಕಂಡ ತಖ್ತೀಯಲ್ಲಿ ವಿವರಿಸಲ್ಪಟ್ಟ ಬಾಗಾಯತು ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ ಮಾನಂದವಾಡೀ ರಸ್ತೇಯಿಂದ ನಂಜನಗೂಡು ರಸ್ತೆಗೆ ಹೋಗುವ ಪೈಸರಾಯಿ ಯವರ ರಸ್ತೆಯನ್ನ ವಿಸ್ತರಿಸುವ ಬಗ್ಯೆ ಜೇಕಾಗಿರುತ್ತೆ:—

ನಂಬರ್.	ಜಮೀನ್ ಇರತಕ್ಕ ಪ್ರದೇಶ.	ಸ್ವಂತಗಾರರ ಹೆಸರು. ಹೇಕಾಗಿರುವ ಸೀನಿಯ್ಯರು ಸೀನಿಯ್ಯರು, ಚಪರ ಗಜಗಳು	ಯಿರತಕ್ಕ ಮರ ವ ಬಳ್ಳಿ ಮುಂತಾದ ವುಗಳ ಸಂಖ್ಯೇ ತಪಸೀಲ್.							ಚಕ್ಕು ಬಂದಿ.	ಷರಾ.
			ತೆಂಗು.	ಸಿಕ್ಕಿಪೆಲೆ ಹಂಬ್ಬು.	ಅಡಿಕೆ.	ಸ್ಪರಂಗೀ ಹೆಣ್ಣೆ ನ ಗಿಡ.	ಬಾಳೆ.	ಸಾಗ್ವಾ.	ಇತರ ಜಾತಿ.		
1	ಕರೂಬಟ್ಟ ರಸ್ತೇಗೂ ಮತ್ತು ಷಹರಿನ ಚಿರಾಂಡಿ ದೊಡ್ಡ ಕಾಲವೆಗೂ ಮಧ್ಯೆ ದಲ್ಲಿನ ಪೂರ್ವಪ್ಪಿ ಮಭಾಗ; ಮುಖ್ಯ ತೋಟಕ್ಕೂ ಸರ ಕಾರದ ಖಣೀಗೂ ನಡು ವೇ ಇರುವ ಉತ್ತರ ದಕ್ಷಿ ಣ ಭಾಗ. 181ನೇ ಸರ್ವೇ ನಂಬರ್ ಪೈಕಿ.	ಸಾಲ್ಗೋಡು ಅರಿಸಿನೆರು.	2689¼	23	834	147	27	134	0	1	ಉತ್ತರಕ್ಕೆ-ಸ್ವೀತಗಾರರ ತೋಟದಭಾಗ, ದಕ್ಷಿಣಕ್ಕೆ ಸದರೀಯವರ ತೋಟದಭಾ ಗ ಮತ್ತು ತಮ್ಮಾ ಇತರ ತೋಟಗಳಿಗೆ ಹೋಗುವಸ ರ್ಕಾರದ ಖಣೀ, ಪೂರ್ವಕ್ಕೆ ಷಹರಿನ ಚಿರಾಂಡಿ ದೊಡ್ಡ ಕಾಳವೆ, ಪಶ್ಚಿಮಕ್ಕೆ ಕರೂ ಬಟ್ಟಾ ರಸ್ತೆ.	ಸಸ್ಯಾದಿಗಳ ಪ್ರಾಬ ಲ್ಯದ ದೆಶೇಯಿಂದ ಕರಾ ರ್ವಾಕಾ ಅಳತೆ ತೆಗದು ಕೊಳ್ಳುವದು ಅನಾನು ಕೂಲವಾಗಿದ್ದ ದ್ದರಿಂದ ಅಂದಾಜ್ ಮೇಲೆ ಈ ಅಂಕೆಗಳು ದಾಖಲ್ಮಾ ಡಲ್ಪಟ್ಟಿರುತ್ತೆ.
2	ವೇಲ್ಲಂಡ ದೊಡ್ಡ ಕಾಲ್ವೇ ಮತ್ತು ಖಣೀಮಧ್ಯೆ ಮಧುಷನ ಮತ್ತು ದೇವ ಪಾರ್ಥಿವರಾಜರವರ ತೋ ಟ ಮತ್ತು ಮಧುವನದ ಬಂದುಭಾಗದ ಮಧ್ಯೆ. ಸರ್ವೇನಂಬರ್ 176–177 ನುತ್ತು 178ರ ಪೈಕಿ.	ತುರಸೇಕೆರೆ ಅರಿಸಿನೆರು.	3793½	10	237	15	1	34	14	1	ಉತ್ತರಕ್ಕೆ ಮಾಲೀಕರ ಮುಖ್ಯತೋಟ, ದಕ್ಷಿಣಕ್ಕೆ ಅವರ ತೋಟದ ಪೈಕೀ ಬಂ ದುಭಾಗ ಮತ್ತು ಸರ್ಕಾರದ ರಸ್ತೆ, ಪೂರ್ವಕ್ಕೆ-ದೇವಪಾ ರ್ಥಿವರಾಜರವರ ತೋಟ ಕ್ಕೂ ಮಧುವನಕ್ಕೂ ಮ ಧ್ಯೆ ಇರುವ ಖಣೀ, ಪಶ್ಚಿ ಮಕ್ಕೆ ಷಹರಿನ ಚಿರಾಂಡಿ ದೊಡ್ಡ ಕಾಲವೆ.	

ತಾರೀಖು 28ನೇ ನವಂಬರ್ 1887.

ಕ್ಯಾಂಪ್ ನಂ. 1907.—ತುಮಕೂರು ಡಿಸ್ಟ್ರಿಕ್ಟ್ ಪೋಲೀಸ್ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಮಡಮ್ಮಿದ್ ಅಲ್ಲೀಯವರಿಗೆ, ಮಾಜೀ ಮಜಕೂರ್ 11ನೇ ಮಕ್ಕಂ ಕ್ಯಾಂಪ್ 1764ನೇ ನಂಬರುಳ್ಳ ಈ ಆಫೀಸಿನ ಇಸ್ತಿಹಾರಿನಿಂದ ಕೊಡಲ್ಪಟ್ಟ ಬಂದು ತಿಂಗಳ ಪ್ರಿವಿಲೀಜ್ ರಜಾಕ್ಕೆ ಜಾಸ್ತಿಯಾಗಿ ಹದಿನೈದು ದಿವಸಗಳ ರಜಾ ಕೊಡೋಣಾಗಿರುತ್ತೆ.

ತಾರೀಖು 29ನೇ ನವಂಬರ್ 1887.

ನಂ. 146.—ಹುಜೂರ್ ಖಜಾನಾ ಲಕ್ಷಿ ಮೆ|| ಎ. ವೀರಾಸಾಮಿ ಮೊದಲಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 30 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 30ನೇ ನವಂಬರ್ 1887.

ನಂ. 147.—ಮೆ|| ಬಳವಾಯಿ ದೇವರಾಜ ಅರಸ್ ನವರು ಫ್ರೆಂಚ್‌ರಾಕ್ಸ್ ಸಬ್ ಡಿವೀರ್ಜ ವಟ್ರೈಜರೀ ಚಾರ್ಜನ್ನ 1887ನೇ ಇಸವಿ ನವೆಂಬರ್ ತಾರೀಖು 23ನೇ ಪೂರ್ವಾಹ್ಣದಲ್ಲಿ ಒಪ್ಪಿಸಿ ಮೆ|| ವೆಂಕಟವರದಯ್ಯಂಗಾರ್ಯವರ, ವಹಿಸುತ್ತಾರೆ.

ಬಿಮೋಜೀಬ್ ಹುಕ್ಕುಂ,

ಆರ್. ವಿಜಯಿೀಂದ್ರರಾವ್,

ಜೀಫ್ ಸೆಕ್ರೆಟೆರಿ.

ವಿದ್ಯಾಭ್ಯಾಸದ ಇಲಾಖೆ.

ಸ್ಃ 1887ನೇ ಇಸವಿ ಡಿಸಂಬರ್ ತಾರೀಖು 8

ಕನ್ನಡ ಭಾಷೆಗಾಗಿ ಬೆಳ್ಳಿಯ ಬಟ್ಟು.

ಇದರಿಂದ ತಿಳಿಸಲ್ಪಡುವದೇನಂದರೆ, ಬೆಂಗಳೂರು ವೆಸ್ಲಿಯರ್ ಮತ್ತು ಲಂಡನ್ ಮಿಸ್ಸರ್ ಹೈ ಸ್ಕೂಲ್‌ಗಳ ಕನ್ನಡ ಮುನಷಿ ಮೆ|| ರಾ|| ಹೊ. ವೆಂಕಟರಾಮಾಶಾಸ್ತ್ರಿ ಎಂಬವರಿಂದ ಸ್ಃ 1888ನೇ ಇಸವಿ ಫೆಬ್ರವರೀ ತಿಂಗಳಲ್ಲಿ ನಡೆಯುವ ಮೈಸೂರು ದೇೀಯ ಉಪಾಧ್ಯಾಯರ ಪರೀಕ್ಷೆಯ ಕನ್ನಡ ಭಾಷೆಯಲ್ಲಿ ಅಧಿಕವಾದ ನಂಬರುಗಳನ್ನ ಹೊಂದಿ ತೇರ್ಗಡೆಯಾಗುವಂಥಾವನಿಗೆ 12 ರೂಪಾಯಿ ಬೆಲೆಯುಳ್ಳ ಬಂದು ಬೆಳ್ಳಿಯ ಬಟ್ಟು ಕೊಡಲ್ಪಡುತ್ತೆ.

ಎಲ್. ರೈಸ್,

ಎಜ್ಯುಕೇಷ್ಯನ್ ಸೆಕ್ರೆಟೆರಿ.